# ಜನಪದ ಗೀತೆಗಳಲ್ಲಿ ಶಿವಶರಣರು

**ತಿಪ್ಪೇಸ್ವಾಮಿ ಡಿ.ಎಸ್.***

**DOI: https://doi.org/10.5281/zenodo.19501668**

**ABSTRACT**

ಹನ್ನೆರಡನೆಯ ಶತಮಾನದ ಶಿವಶರಣರ ಬದುಕು, ಸಾಧನೆ ಮತ್ತು ಕಲ್ಯಾಣದ ಕ್ರಾಂತಿಯು ಅನಕ್ಷರಸ್ಥ ಜನಪದರ ಬಾಯ್ದೆರೆಯ ಹಾಡುಗಳಲ್ಲಿ ಹೇಗೆ ಜೀವಂತವಾಗಿ ಉಳಿದುಬಂದಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಹಂತಿಯ ಪದ, ಬೀಸುವ ಪದ, ಡೊಳ್ಳಿನ ಪದ ಹಾಗೂ ಸುಗ್ಗಿಯ ಹಾಡುಗಳ ಮೂಲಕ ಜನಸಾಮಾನ್ಯರು ಬಸವಣ್ಣ, ಚೆನ್ನಬಸವಣ್ಣ ಮುಂತಾದ ಶರಣರನ್ನು ತಮ್ಮ ನಿತ್ಯದ ಕಾಯಕದೊಂದಿಗೆ ಬೆಸೆದುಕೊಂಡಿರುವ ಬಗೆಯನ್ನು ಲೇಖಕರು ಕಟ್ಟಿಕೊಡುತ್ತಾರೆ. "ಕಳಬೇಡ, ಕೊಲಬೇಡ"ದಂತಹ ವಚನಗಳ ಆಶಯಗಳು ಡೊಳ್ಳಿನ ಪದಗಳಲ್ಲಿ ಪ್ರಾಸಬದ್ಧವಾಗಿ ಮಾರ್ಪಾಡಾಗಿರುವುದನ್ನು ಉದಾಹರಣೆಗಳೊಡನೆ ವಿವರಿಸಲಾಗಿದೆ. ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾಗಿ, ಜನಪದ ಸಾಹಿತ್ಯವು ಶರಣರ ಸಮಾನತೆಯ ತತ್ವಗಳನ್ನು ಮತ್ತು ಕಲ್ಯಾಣದ ದುರಂತದ ನೋವನ್ನು ಗ್ರಾಮೀಣ ಸೊಗಡಿನಲ್ಲಿ ತಲೆತಲಾಂತರಗಳಿಗೆ ಹೇಗೆ ದಾಟಿಸಿದೆ ಎಂಬ ಸಾಂಸ್ಕೃತಿಕ ಅಧ್ಯಯನವನ್ನು ಈ ಲೇಖನ ಒದಗಿಸುತ್ತದೆ.

**KEYWORDS:** ಜನಪದ ಸಾಹಿತ್ಯ, ಶಿವಶರಣರು, ಡೊಳ್ಳಿನ ಪದಗಳು, ಕಾಯಕ ಸಂಸ್ಕೃತಿ, ಕಲ್ಯಾಣ ಕ್ರಾಂತಿ.

* **ಡಾ. ತಿಪ್ಪೇಸ್ವಾಮಿ ಡಿ.ಎಸ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.

ಜನಪದ ಕವಿಗಳು ತಾವು ಓದು ಬರಹ ಬಾರದ ಅನಕ್ಷರಸ್ಥರು. ಅದರ ಗಂಧವೂ ತಮಗಿಲ್ಲ ಎಂದು ವಿನಯದಿಂದ ತೋಡಿಕೊಂಡಿದ್ದಾರಾದರೂ, ಅವರಿಂದ ರಚಿತವಾಗಿರುವ ವೈವಿಧ್ಯಮಯ ಸಾಹಿತ್ಯ ನಮ್ಮನ್ನು ಬೆರಗುಗೊಳಿಸುತ್ತದೆ. ಓದುಬರಹದ ಗಂಧವೇ ಇಲ್ಲದ ಅವರಿಂದ ಹುಟ್ಟಿಕೊಂಡಿರುವ ಸಾಹಿತ್ಯ ರಾಶಿಯನ್ನು ಗಮನಿಸಿದಾಗ ಅದರ ಸಾಹಿತ್ಯ ಶ್ರೀಮಂತಿಕೆಗೆ ಬೆರಗಾಗದ ಜನವಿಲ್ಲ. ಪಂಡಿತ ಪಾಮರರೆನ್ನದೆ ಎಲ್ಲ ವರ್ಗದ ಜನರನ್ನೂ ತನ್ನ ತೆಕ್ಕೆಗೆ ಒಳಕೊಳ್ಳಬಲ್ಲ ಶಕ್ತಿ ಜನಪದ ಸಾಹಿತ್ಯಕ್ಕೆ ಮಾತ್ರ ಮೀಸಲು. ಈ ದೃಷ್ಟಿಯಿಂದ ಗಮನಿಸಿದಾಗ ಶಿಷ್ಟಸಾಹಿತ್ಯಕ್ಕೆ ದೊರೆತಿರದ ಒಂದು ಸೌಭಾಗ್ಯ ಜನಪದ ಸಾಹಿತ್ಯಕ್ಕೆ ದೊರೆತಿದೆ. ಶಿಷ್ಟ ಸಾಹಿತ್ಯ ಪಂಡಿತರಿಗೆ ಮಾತ್ರ ಮೀಸಲು, ಆದರೆ ಜನಪದ ಸಾಹಿತ್ಯ ಈ ಎರಡು ವರ್ಗದ ಜನರಿಗೂ ಅರ್ಥವಾಗಬಲ್ಲಂಥ ಸಾಹಿತ್ಯ, ಪ್ರಿಯವಾದ ಸಾಹಿತ್ಯ.

ಇಂತಹ ಅಪೂರ್ವ ಸಾಹಿತ್ಯ ಅನಾದಿಯಿಂದಲೂ ಬೇರು ಬಿಟ್ಟು ಉಳಿದು ಬಂದಿದ್ದರೂ, ಈ ನಾವು ಶಿಷ್ಟ ರೂಪದಲ್ಲಿ ಕಾಣುತ್ತಿರುವ ರಾಮಾಯಣ, ಮಹಾಭಾರತದಂತಹ ಮಹತ್ಕೃತಿಗಳಿಗೆ ಈ ಜನಪದ ಸಾಹಿತ್ಯವೇ ಬೀಜರೂಪ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದರೂ, ಶತಮಾನಗಳಿಂದಲೂ ಜನಪದ ಸಾಹಿತ್ಯ ಪಂಡಿತರ ಅನಾದರಣೆಗೆ ಗುರಿಯಾಗಿ ಮೂಲೆಗುಂಪಾಗಿ ಉಳಿದು ಬಂದಿತು. ಅದು ಎಲ್ಲಿ ತನ್ನ ಹುಟ್ಟನ್ನು ಪಡೆದುಕೊಂಡಿತೋ ಅಲ್ಲಿಯೇ ಮುದುಡಿ ಉಸಿರಾಡುತ್ತಾ ಬದುಕಬೇಕಾಯಿತು. ಪಂಡಿತ ವರ್ಗದ ಜನ ಅದರತ್ತ ಕಣ್ಣನ್ನು ಹಾಯಿಸಿದಷ್ಟು ತಿರಸ್ಕಾರದಿಂದ ಕಂಡರು. ಇಷ್ಟಾದರೂ ಜನಪದ ಸಾಹಿತ್ಯ ತನ್ನ ಶ್ರೀಮಂತ ಶಕ್ತಿಯಿಂದಾಗಿ ಮೂಲ ಸಂಸ್ಕೃತಿಯ ಸಾರವನ್ನು ಹೊತ್ತ ಅದರ ವಿಶಿಷ್ಟ ಗುಣದಿಂದಾಗಿ ಇದುವರೆಗೂ ಅದರ ಸೊಗಡು ಸ್ವಲ್ಪವೂ ಕೆಡದಂತೆ ಉಳಿದು ಬರಲು ಸಾಧ್ಯವಾಯಿತು. ಸಾಮಾನ್ಯವಾದ ಸಾಹಿತ್ಯವಾಗಿದ್ದಿದ್ದರೆ ಇಂತಹ ಒಂದು ಅನಾದರಣೆಯಲ್ಲಿ ಅದು ಎಂದೋ ಎಲ್ಲಿಯೋ ಗಾಳಿಯಲ್ಲಿ ತೂರಿ ಹೋಗುತ್ತಿತ್ತು, ಹೇಳ ಹೆಸರಿಲ್ಲದಂತೆ ಮರೆಯಾಗುತ್ತಿತ್ತು. ಆದರೆ ಅದು ಜನತೆಯ ಸಂಸ್ಕೃತಿಯ ಅಂತರಾಳದಲ್ಲಿ ಬೇರು ಬಿಟ್ಟು ಬೆಳೆದದ್ದರಿಂದ ಅದನ್ನು ಎಂಥದೇ ಬಿರುಗಾಳಿಯು ಅಲುಗಿಸಲು ಸಾಧ್ಯವಾಗಲಿಲ್ಲ.

ಜನಪದ ಸಾಹಿತ್ಯ ಕಂಠಸ್ಥ ಸಂಪ್ರದಾಯದಲ್ಲಿಯೇ ಉಳಿದುಕೊಂಡು ಬಂದ ಸಾಹಿತ್ಯ. ತಮ್ಮ ಪಾಡನ್ನೇ ಹಾಡಾಗಿ ನೀಡಿದ ಬಾಳಿನ ನೋವು–ನಲಿವುಗಳನ್ನೇ ಸಾಹಿತ್ಯವನ್ನಾಗಿಸಿಕೊಂಡ ಒಂದು ಅಪೂರ್ವ ಪ್ರಕಾರ ಬಾಯಿಂದ ಬಾಯಿಗೆ ಜಾರಿಕೊಂಡು ತಲೆತಲಾಂತರದಿಂದ ಸ್ವಲ್ಪವೂ ಮಾಸದಂತೆ ಅದು ಹೇಗೋ ಉಳಿದು ಬಂದಿತು. ಅವರ ಬದುಕಿಗೆ ಹತ್ತಿರವಾಗಿ ಹಲವೊಮ್ಮೆ ಅದೇ ಅವರ ಬದುಕೆಂಬಂತೆ ಕಂಡು ಬಂದಿದ್ದರಿಂದ ಅಷ್ಟು ಸುಲಭವಾಗಿ ಅವರಿಂದ ಅದು ದೂರವಾಗಲು ಸಾಧ್ಯವಾಗಲಿಲ್ಲ. ಜನಪದ ಸಾಹಿತ್ಯ ಕಂಠಸ್ಥ ಸಂಪ್ರದಾಯದಲ್ಲಿಯೇ ಉಳಿದುಕೊಂಡು ಬಂದ ಸಾಹಿತ್ಯವಾಗಿದ್ದು; ತಮ್ಮ ಪಾಡನ್ನೇ ಹಾಡಾಗಿ ನೀಡಿದ ಬಾಳಿನ ನೋವು ನಲಿವುಗಳನ್ನೇ ಸಾಹಿತ್ಯವನ್ನಾಗಿಸಿಕೊಂಡ ಒಂದು ಅಪೂರ್ವ ಪ್ರಕಾರ ಬಾಯಿಂದ ಬಾಯಿಗೆ ಜಾರಿಕೊಂಡು ತಲೆತಲಾಂತರದಿಂದ ಸ್ವಲ್ಪವೂ ಮಾಸದಂತೆ ಅದು ಹೇಗೋ ಉಳಿದು ಬಂದಿತು. ಅವರ ಬದುಕಿಗೆ ಹತ್ತಿರವಾಗಿ, ಹಲವೊಮ್ಮೆ ಅದೇ ಅವರ ಬದುಕೆಂಬಂತೆ ಕಂಡು ಬಂದದ್ದರಿಂದ ಅಷ್ಟು ಸುಲಭವಾಗಿ ಅವರಿಂದ ಅದು ದೂರವಾಗಲು ಸಾಧ್ಯವಾಗಲಿಲ್ಲ. ಈ ಮಾತು ಕರ್ನಾಟಕಕ್ಕಾಗಲೀ ಅಥವಾ ಭಾರತಕ್ಕಷ್ಟೇ ಅನ್ವಯವಾಗುವಂತಹುದಲ್ಲ, ಇಡೀ ವಿಶ್ವಕ್ಕೆ ಅನ್ವಯಿಸುವಂತಹುದು. ಪ್ರಪಂಚದಾದ್ಯಂತವೂ ಎಲ್ಲ ರಾಷ್ಟ್ರಗಳೂ ಜಾನಪದದತ್ತ ಹೆಚ್ಚು ಗಮನವನ್ನು ಹರಿಸಿ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಉಳಿದಿರುವ ಮಾರ್ಗ ಇದೊಂದೇ ಎಂಬುದನ್ನು ಅವರು ಬೇಗ ಅರಿತುಕೊಂಡರು. ಇದರಿಂದಾಗಿ ಜಾನಪದಕ್ಕೆ

ಸಂಬಂಧಿಸಿದ ಸಂಗ್ರಹಣೆ, ಸಂಶೋಧನೆ ಮತ್ತು ಪ್ರಕಟಣೆಯತ್ತ ಅವರು ಹೆಚ್ಚು ಹೆಚ್ಚು ಗಮನ ಹರಿಸಿದರು.

ಜನಪದ ಗೀತೆಗಳು ಜನಪದ ಸಾಹಿತ್ಯದ ಒಂದು ಅಂಗ ಅಷ್ಟೇ. ಜನಪದ ಗೀತೆಗಳಲ್ಲಿಯೂ ನಾವು ಹಲವು ಒಳಗುಂಪುಗಳನ್ನು ಕಾಣಬಹುದು. ಹೀಗೆ ನೋಡಿದಾಗ ಜನಪದ ಗೀತೆಗಳಲ್ಲಿ ಗೃಹಿಣಿ ಹಾಡು, ಲಾವಣಿಗಳು, ಕೋಲಾಟ, ಲಾಲಿಹಾಡು, ಬೀಸುವ ಪದ, ಮದುವೆ ಹಾಡು, ನೀತಿಪದಗಳು, ಸುಗ್ಗಿಯ ಹಾಡು, ಕಥನಗೀತೆಗಳು, ಶಿಶುಹಾಡು, ಡೊಳ್ಳಿನ ಹಾಡು ಇತ್ಯಾದಿ ಜನಪದರ ಮೇಲೆ ಪ್ರಭಾವ ಬೀರಿದ ಶಿವಶರಣರ ಬದುಕು ಪ್ರತಿಬಿಂಬಿತವಾಗಲು ಸಾಧ್ಯವಾಯಿತು. ಜನಪದರು ಹೇಳುವಂತೆ:

**ಜನಪದ ಗೀತೆಗಳಲ್ಲಿ ಶಿವಶರಣರು:**

**ಒಂದು ಸುತ್ತಿನ ಕ್ವಾಟೆ**
**ಅದರೊಳು ಹೊಂದಿ ನಿಂತಾನ ಬಸವ**
**ಬಸವಕ ಬಸವನ್ನಿರೆ**
**ಬಸವನ ಪಾದಕ ಶರಣೆನ್ನಿರೆ**
**ಆರು ಸುತ್ತಿನ ಕ್ವಾಟೆ**
**ಅದರೊಳು ಅರಳಿ ಬೆಳಗುವ ಬಸವ**
**ಬಸವಕ ಬಸವನ್ನಿರೆ**
**ಬಸವನ ಪಾದಕ ಶರಣೆನ್ನಿರೆ**
**ಹತ್ತು ಸುತ್ತಿನ ಕ್ವಾಟೆ**
**ಅದರೊಳು ಸುತ್ತನೋಡಲು ಬಸವ**
**ಬಸವಕ ಬಸವನ್ನಿರೆ**
**ಬಸವನ ಪಾದಕ ಶರಣೆನ್ನಿರೆ**

ಜನಪದರು ತಮ್ಮ ಕಾಯಕ ಕೆಲಸವನ್ನು ತಮ್ಮ ಜೀವನದ ಆಚರಣೆಗಳಲ್ಲಿ, ಎತ್ತನ್ನು ಹುಣ್ಣಿಮೆಗಳಲ್ಲಿ ಸಿಂಗರಿಸಿ ಪೂಜೆ ಮಾಡುತ್ತ ಬಂದಿದ್ದಾರೆ. ದುಡಿದು ಎಲ್ಲರಿಗೂ ಅನ್ನದಾತನಾದ ಈ ಬಸವನು ಹಳ್ಳಿಗರ ಎಲ್ಲ ದೇವರನ್ನು ಕಾಯುತ್ತ ಬಂದಿದ್ದಾನೆ. ಅಂತೆಯೇ ಹಳ್ಳಿಗರ ಪ್ರತಿಯೊಂದು ಪಾದಗಟ್ಟಿಗೆ ಬಸವನ ಗದ್ದುಗೆ ಹಾಕಿದ್ದಾನೆ. ಹೀಗೆ ಬಸವನು ಕನ್ನಡಿಗರ ಜೀವನದಲ್ಲಿ ತನ್ಮಯನಾಗಿ ಬಂದಿದ್ದಾನೆ, ಅವರಿಗೆ ಅವನೇ ದೇವನಿದ್ದಂತೆ. ಇಂತಹ ಬಸವನ ದಿವ್ಯ ಸಂಪ್ರದಾಯವನ್ನು ಕನ್ನಡಿಗರು ಹೇಗೆ ಮರೆಯಬೇಕು? ಅಂತೆಯೇ ಬಸವನ ವಿವಿಧ ರೂಪಗಳನ್ನು ಕನ್ನಡದ ಜನಾಂಗವು ತಪ್ಪದೆ ಇಂದಿನವರೆಗೂ ಪೂಜೆ ಮಾಡುತ್ತ ಬಂದಿದ್ದಾರೆ.

ಹಂತಿಯ ಹಾಡುಗಾರಿಕೆಯಲ್ಲಿ ಕಲ್ಯಾಣದ ಶಿವಶರಣರನ್ನು ಕೊಂಡಾಡುವ ಒಂದು ವೈಶಿಷ್ಟ್ಯವಾಗಿದೆ. ಅವು ಶರಣರ ಹಂತೀ ಪದಗಳೆಂದೇ ಪ್ರಸಿದ್ಧವಾಗಿವೆ. 12ನೇ ಶತಮಾನದಲ್ಲಾಗಿ ಹೋದ ಶರಣರ ಕ್ರಾಂತಿಯ ದೀಪ್ತಿ ಜನಪದರಲ್ಲೂ ಹೊಸ ಬೆಳಕನ್ನು ನೀಡಿದೆ. ಶರಣರನ್ನು ನೆನೆದು ತನ್ನ ಸುಗ್ಗಿಯ ಕಣಕ್ಕೆ ಬರಮಾಡಿಕೊಳ್ಳುವುದರಲ್ಲಿ ರೈತರಿಗೆ ನೆಮ್ಮದಿ.

**ಶರಣರ ನೆನೆದರ ಸುರಗಿಯ ಇಟ್ಟಾಂಗ**
**ಅರಳಿ ಮಲ್ಲಿಗೆ ಮೂಡಿದ್ಹಾಂಗ । ಕಲ್ಯಾಣ**
**ಶರಣರ ನೆನೆಯೋ ಎಲೆ ಮನವೆ!**

ಎನ್ನುವ ರೈತ, ತನಗೆ ತಾನೇ ವಿವೇಕದ ಹಾದಿ ಮಾಡಿಸಿಕೊಳ್ಳುವಲ್ಲಿ ಕೃತಾರ್ಥನಾಗಿದ್ದಾನೆ.

ಈ ಶರಣರನ್ನಲ್ಲದೇ ತಮ್ಮ ಉಗ್ರಭಕ್ತಿಯಿಂದ ಶಿವನೊಲುಮೆಗೆ ಪಾತ್ರರಾದ ಅರವತ್ತು ಮೂರು ಪುರಾತರನ್ನು ಮತ್ತು ಐತಿಹಾಸಿಕವಾಗಿ ಪ್ರಸಿದ್ಧರಾದವರನ್ನು ಕುರಿತ ಹಾಡುಗಳೂ ಹಂತಿ ಸಂಪ್ರದಾಯದಲ್ಲಿ ಪ್ರಸಿದ್ಧವಾಗಿವೆ. ಇದಲ್ಲದೇ ತಮ್ಮ ಸ್ಥಳೀಯರಾಗಿದ್ದು ದಾನ ಧರ್ಮಗಳಲ್ಲಿ ಮಿಗಿಲೆನಿಸಿ ಹೋದವರನ್ನು, ವೀರ–ಧೀರ–ಶೂರರನ್ನೂ, ದೇಶಾಭಿಮಾನಿಗಳನ್ನು ಮುಕ್ತ ಕಂಠದಿಂದ ಹೊಗಳಿದ ಹಾಡುಗಳಂತೂ ಲೆಕ್ಕವೇ ಇಲ್ಲ.

**ಸತ್ಯವಂತರೆಂದು ಶರಣ ಮಾಡಲಿ ಹೋದ**
**ಮತ್ಯಾಕ ಮಾರಿ ತಿರುವ್ಯಾರ । ಬಸವಣ್ಣ**
**ಮುತ್ತ ತಂದೀದ ಮಗಡಕ**
**ಆಕಾಶದಡವ್ಯಾಗ ಧೂಪದ ಹೊಗೆ ಎದ್ದು**
**ಆಯ್ತು ಮಲ್ಲಯ್ಯನ ಶಿವಪೂಜೆ । ಅಗಾಗ**
**ಆಕಾಶದ ಘಂಟೆ ಘಳಲೆಂದು**
**ಅರಸಿನಗೋಡಿ ಗೌಡ ಉದಯ ಪೂಜೆಗೆ ಹೋಗಿ**
**ಕದನದ ಯಲ್ಲವ್ವ ಕದ ತಗಿಯ । ನೀ ಕೊಟ್ಟ**
**ಪುತ್ರನ ತಂದೀನಿ ಜಡಿ ಇಳವ**
**ಎಳ್ಳಹೂವಿನ ಸೀರಿ ಎಲ್ಲಾರ ಉಡತಾರ**
**ಇಲ್ಲದ ಬಡವಿ ಎಲ್ಲಮ್ಮ । ಉಟ್ಟಾಳ**
**ನೂರೊಂದೆಲೆಯ ಎಳೆಬೇವೂ**

ಜನಪದರು ಹಂತಿ ಹೊಡೆಯುತ್ತ, ಬೀಸುವ ಕಲ್ಲು ಎಳೆಯುತ್ತ, ರಾಗೋಲಿನಿಂದ ತೆನೆ ಎಳೆಯುತ್ತ, ಕೈಯಿಂದ ಮುಕ್ಕು ಹಾಕುತ್ತ, ರಾತ್ರಿ ಮಧ್ಯರಾತ್ರಿ– ನಸುಕುಗಳಲ್ಲಿ ತೆನೆಯಿಂದ ಕಾಳು ತೆಗೆಯುವ ಶರಣರ ಬದುಕನ್ನು ನೆನೆಯುತ್ತಾ, ಬದುಕಿನಲ್ಲಿ ಸತ್ಯವಂತರಾಗಿ ಬದುಕಿದರು ಎಂಬ ಗೀತೆಗಳಲ್ಲಿ ಕಾಣುತ್ತೇವೆ.

ಉತ್ತರ ಕರ್ನಾಟಕದಲ್ಲಿ ಹಾಲುಮತದ ಕುರುಬರು ಡೊಳ್ಳು ಬಾರಿಸುತ್ತ, ಕಹಳೆ ಊದುತ್ತ ಶರಣರ ಹಾಡುಗಳನ್ನು ಹಾಡುತ್ತಾರೆ. ಹಬ್ಬ ಉತ್ಸವ ಜಾತ್ರೆಗಳಲ್ಲಿ ಡೊಳ್ಳಿನ ಪದ ಹೇಳುವವರನ್ನು ಕರೆಯಿಸುತ್ತಾರೆ. ಮಳೆ ಬಾರದಿದ್ದಾಗ ಡೊಳ್ಳು ಬಾರಿಸುವ ಹಲವಾರು ಗುಂಪುಗಳು ಕೂಡಿ ತನ್ಮಯತೆಯಿಂದ ಹಾಡಿದಾಗ ಮಳೆ ಬರುವುದೆಂಬ ನಂಬಿಕೆ ಇಂದಿಗೂ ಹಳ್ಳಿಗಳಲ್ಲಿದೆ. 'ನಂಬಿ ಕರೆದಡೆ ಓ ಎನ್ನನೇ ಶಿವನು' ಎಂಬ ಮಾತಿನ ನಿದರ್ಶನ ಜನರಲ್ಲಿದೆ.

**ಧರೆಯ ಮೇಲೆ ನಿಂತು ಕರವ ಮುಗಿದು ನಾ**
**ಮಾರ ಹರನನು ಸ್ಮರಿಸುವೆನು ನಾ**
**ಹೇ ಮಂಡಗಿ ಮಾದರಸು ಮಡದಿ ಗರ್ಭದಲ್ಲಿ**
**ಸೇರಿದನು ಬಸವೇಶ್ವರನು ವೃಷಭೇಶ್ವರನು**

ಎಂಬ ಗೀತೆಯಲ್ಲಿ ಬಸವೇಶ್ವರನ ಜೀವನದ ಕೆಲವು ಸಂಗತಿಗಳಿವೆ. ಡೊಳ್ಳು ಬಾರಿಸುತ್ತ ಇಂಥ ಹಲವಾರು ಪದಗಳನ್ನು ಜನಪದರು ಹಾಡುತ್ತಾ ಕುಣಿಯುತ್ತಾ ಬಂದಿದ್ದಾರೆ. ಕಲ್ಯಾಣ ಮಂಟಪದಲ್ಲಿ ಬಸವೇಶ್ವರನ ನಾಯಕತ್ವದಲ್ಲಿ ಎಲ್ಲಾ ಜನಾಂಗದ ಶರಣರನ್ನು ಸೇರಿಸಿದ ಪ್ರಸಂಗವನ್ನು ಕುರಿತು ಡೊಳ್ಳಿನ ಪದಗಳ ಮುಖಾಂತರ ವರ್ಣಿಸುವರು:

**ಸ್ವಾಮಿ ನಮ್ಮ ದೇವರು ಬಂದಾವು ಬನ್ನೀರೋ**
**ದೇವಿ ನಮ್ಮ ದೇವರು ಬಂದಾವು ಬನ್ನೀರೋ**
**ಹೇಳುವೆ ಕೇಳ್ತಮ್ಮ ಮುತ್ತಿನಂಥ ಮಾತ**

**ಸತ್ತುಳ್ಳ ಶರಣರು ಹೇಳಿದ ಮಾತ**
**ಸತ್ತುಳ್ಳ ಶರಣರು ಹೇಳಿದ ಮಾತ ನೀ**
**ಚಿತ್ತದಲ್ಲಿರಿಸಿ ಕೇಳಬೇಕ**
**ಸುಳ್ಳು ಹೇಳಲು ಬೇಡ, ಕಳವು ಮಾಡಲಿ ಬೇಡ**
**ಡೊಳ್ಳ ಬಡಿಯುವ ಬಾರೋ ದ್ಯಾಮವ್ವನ ಗುಡಿ ಮುಂದ**
**ಹೊಳ್ಳಿ ಹೊಳ್ಳಿ ಹಾರಾಡಿ ನಲಿದಾಡಿ**

ಈ ಹಾಡು ಬಸವಣ್ಣನವರ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸ ಬೇಡ, ಎದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮ ದೇವನನೊಲಿಸುವ ಪರಿ" ಎಂಬ ವಚನದ ಪಡಿನೆಳಲಾಗಿದೆ. ಪ್ರಾಸಬದ್ಧವಾಗಿ ಕುಣಿತದ ತಾಳಕ್ಕೆ ಡೊಳ್ಳಿನ ಸ್ವರ ಹೊಮ್ಮುವುದು, ಆಗ ಕುರುಬನ ಕಣ್ಣು ಕುರಿಯ ಹಿಂಡಿನ ಮೇಲೆ, ಡೊಳ್ಳಿನ ಮೇಲೆ ಮನ ಬೀರಪ್ಪನ ಮ್ಯಾಲೆ ಎನ್ನುವುದನ್ನು ಕವಿ ಸಹಜ ಸುಂದರವಾಗಿ ವರ್ಣಿಸಿದ್ದಾನೆ.

ಹೀಗೆ ಜನಪದರು ಕಲ್ಯಾಣದಲ್ಲಿ ಬಸವಣ್ಣನ ಕುರಿತು ಡೊಳ್ಳಿನ ಹಾಡುಗಳಲ್ಲಿ ಕಾಣುತ್ತೇವೆ. ಇವು ಇಡೀ ಜನಸಮುದಾಯದ ಮೇಲೆ ತನ್ನ ಕರಾಳ ಛಾಯೆಯನ್ನು ಬೀರಿದ ಹನ್ನೆರಡನೇ ಶತಮಾನದ ಅತ್ಯಂತ ದೊಡ್ಡ ದುರಂತ ಘಟನೆ ಇದೆಂದು ಭಾವಿಸಬಹುದು. ಈ ದುರ್ಘಟನೆ ಸಂಭವಿಸಿದ ನಂತರ ಅಲ್ಲಿಂದ ಬಸವಣ್ಣ ಕಾಲ್ತೆಗೆಯುವ ಸಂದರ್ಭದಲ್ಲಿ ಅಲ್ಲಿಯವರೆಗೆ ಏನೆಲ್ಲ ಸೃಜನಶೀಲ ಚಟುವಟಿಕೆಗಳು ನಡೆದಿದ್ದವೋ ಅವೆಲ್ಲ ಜವಾಬ್ದಾರಿಗಳನ್ನು ಚೆನ್ನಬಸವಣ್ಣನಿಗೆ ಒಪ್ಪಿಸಿ ಹೊರಡುತ್ತಾನೆ.

**ಶಿವಯೋಗ ಮಗ ಬಾರೋ, ಶಿವಪುತ್ರ ಚೆನ್ನಬಸವ**
**ಶಿವನಾಣೆ ಚೆನ್ನ ಬಸವಣ್ಣ । ಕಲ್ಯಾಣ**
**ಶಿವಕಳಸ ಬಾರೋ ಮಂಟಪಕೆ**
**ಕಳೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ**
**ವರ ಚೆನ್ನಬಸವ ಶರಣರಿಗೆ । ಕಂಟಕದ**
**ಹುರಿಯೊಳು ಕಾಯೋ ಹೊಸಮತದ**
**ಹೇಳಿ ಹೊರಟನು ಬಸವ ಕೇಳಲಾರದೆ ಮಾತ**
**ಗೋಳಿಟ್ಟು ಜನವು ಸರಮಾಲೆ । ಸಂಗಮಕೆ**
**ಅಳು ಬಸವಯ್ಯ ದಯವಿಟ್ಟು**

ಶಿವಕಳಸದೋಪಾದಿಯಲ್ಲಿದ್ದ ಚೆನ್ನಬಸವಣ್ಣನನ್ನು ಕರೆದು ಆಶೀರ್ವದಿಸಿ, ಶರಣರಿಗೆ ಕಂಟಕ ಸಂಭವಿಸಿದ ಈ ಸಂದರ್ಭದಲ್ಲಿ ಅವರನ್ನು ಕಾಯುವ ವೀರಾಳು ನೀನು. ಹಾಗೆಯೇ ಹೊಸ ಮತವನ್ನು ಕಾಯುವ ಜವಾಬ್ದಾರಿ ನಿನ್ನದು ಎಂದು ಹೇಳಿ ಹೊರಟಾಗ ಅಲ್ಲಿ ನೆರೆದಿದ್ದ ಜನರೆಲ್ಲರೂ ಎಷ್ಟೊಂದು ದುಃಖದಿಂದ ಗೋಳಾಡಿದರು ಎಂಬುದನ್ನು ಜನಪದ ಕವಿ ಅತ್ಯಂತ ಹೃದಯ ತಟ್ಟುವ ಹಾಗೆ ವರ್ಣಿಸಿದ್ದಾರೆ. ಹಬ್ಬ ಹರಿದಿನಗಳಲ್ಲಿ, ಉತ್ಸವ ಜಾತ್ರೆಗಳಲ್ಲಿ ಹತ್ತೂರು ಜನ ರೈತರು ಕೂಡಿ ಉತ್ಸಾಹದಿಂದ ಶಿವಶರಣರನ್ನು ಹಾಡಿಕೊಂಡ ರೀತಿ ಸ್ಮರಿಸುವ ಬಗೆಯನ್ನು ಕಂಡಾಗ ಮುಗ್ಧ ಮನೋಧರ್ಮದಿಂದ ಜನಪದರ ಮನಸ್ಸು ವೈಭವೀಕರಿಸುತ್ತದೆ. ಬಸವಣ್ಣ ಎಂದರೆ ಜನಪದರ ಪಾಲಿಗೆ ಎಲ್ಲವನ್ನು ಬಲ್ಲ ಜ್ಞಾನಿ, ಇಡೀ ನಾಡಿಗೆ ಶಿವ ಬೆಳಕಿನ ಜ್ಯೋತಿಯನ್ನು ತಂದವನು. ಆ ಜ್ಯೋತಿಯ ಪ್ರಕಾಶವನ್ನು ಕುರಿತು

ಜನಪದರು ಹಾಡುತ್ತಾ ಬಂದ ಪ್ರಸಂಗ ಹೀಗಿದೆ:

**ಉತ್ತ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ**
**ಸತ್ಯ ಶಿವ ಮಂತ್ರ ನೆನೆದೇನು ಶಿವಶರಣರ**
**ಮರ್ತ್ಯದೊಳು ಮಂತ್ರ ಜೀವನಕೆ**

ಜನಪದರು ಹೊಲ-ಗದ್ದೆಗಳಲ್ಲಿ ಉಳುವಾಗ ಶಿವಶರಣರ ನೆನಪೇ ಅವರ ಬದುಕಿನ ಉಸಿರಾಗಿದೆ. ಶರಣ ಹೆಸರು ಮರ್ತ್ಯದ ಎಲ್ಲರ ಬದುಕಿನಲ್ಲಿಯೂ ಶಿವಮಂತ್ರವೆಂದು ಪರಿಗಣಿಸಲ್ಪಟ್ಟಿದೆ. ಅಂದರೆ ಜನಪದರ ಬದುಕಿನ ಮೇಲೆ ಉಂಟು ಮಾಡಿದ ಪ್ರಭಾವ ಮುದ್ರೆಯನ್ನು ಕಾಣಬಹುದಾಗಿದೆ.

**ಹಡೆದವ್ವ ಮಾದವ್ವ ಹಡೆದಪ್ಪ ಮಾದರಸ**
**ಪಡೆದವ್ವ ಅಕ್ಕನಾಗಾಯಿ । ಬಸವನಿಗೆ**
**ಬಿಡದೆ ಸಲುಹಿದನು ವರಸಂಗ**

ಶಿವಶರಣರ ಆಂದೋಲನದ ಪ್ರಮುಖ ನಾಯಕನಾಗಿದ್ದ ಬಸವಣ್ಣನನ್ನು ಹಡೆದವರು ಮಾದಲಾಂಬೆ ಮತ್ತು ಮಾದರಸ. ಹಡೆದವರು ಈ ದಂಪತಿಗಳಾಗಿದ್ದರೂ ಕೂಡ ಪಡೆದವಳು ಅಕ್ಕನಾಗಮ್ಮ. ಇವನ ಕ್ರಿಯಾಶೀಲ ಚಳುವಳಿಗೆ ಪ್ರಮುಖ ಪ್ರೇರಣೆಯನ್ನು ತನ್ನ ಅಕ್ಕನಾದ ಅಕ್ಕನಾಗಮ್ಮನಿಂದ ಪಡೆದುಕೊಂಡ ಎಂದರೆ ಅತಿಶಯೋಕ್ತಿಯಾಗಲಾರದು. ಅವನ ಎಲ್ಲ ಕಾರ್ಯ ಚಟುವಟಿಕೆಗಳಿಗೂ ಕೂಡಲಸಂಗಮನಾಥನ ಕೃಪಾಶೀರ್ವಾದ ಅವನನ್ನು ಬಿಡದೆ ಕಾಪಾಡಿತು ಎಂಬುವುದನ್ನು ಜನಪದರು ಅತ್ಯಂತ ಭಕ್ತಿ ಪೂರ್ವಕವಾಗಿ ನೆನೆಯುವುದನ್ನು ಕಾಣುತ್ತೇವೆ.

ಇತಿಹಾಸದಲ್ಲಿ ಆಗಿ ಹೋದ ಶಿವಶರಣರ ಆಂದೋಲನ ಇಡೀ ಕರ್ನಾಟಕದ ಜನಮನದಲ್ಲೆಲ್ಲ ವ್ಯಾಪಕವಾಗಿ ಹರಡಿ ಭಾರತದ ಬೇರೆ ಬೇರೆ ರಾಜ್ಯಗಳಿಂದಲೂ ಜನರನ್ನು ಆಕರ್ಷಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದರ ಮೂಲಕ ಭಾರತೀಯ ಸಾಂಸ್ಕೃತಿಕ ಪರಂಪರೆಯು ಎಂದೂ ಕಂಡರಿಯದಂತಹ ಆಂದೋಲನದ ದಾಖಲೆಯಾಗಿ ಉಳಿದುಕೊಂಡಿತು. ಅನೇಕ ಅಕ್ಷರಸ್ಥ ಜನಸಮುದಾಯ ಈ ಆಂದೋಲನದ ನೇತಾರರಾಗಿದ್ದರೂ ಸಹ, ಪಾಲ್ಗೊಂಡವರೆಲ್ಲರೂ ಜನಪದ ಪರಿಸರದಿಂದ ವಿವಿಧ ವೃತ್ತಿಗಳನ್ನು ನಿರ್ವಹಿಸುತ್ತಿದ್ದವರೆಲ್ಲ ಸೇರಿದ ಕಾರಣ ಇದು ಗಟ್ಟಿಗೊಂಡ ಆಂದೋಲನವಾಯಿತು. ಸಮಾಜದ ವಿವಿಧ ವರ್ಗಗಳೆಲ್ಲ ಕೂಡಿ ವಿಶ್ವಧರ್ಮದ ಅಡಿಯಲ್ಲಿ ನಿಂತು ತಮ್ಮನ್ನು ಏಕರೂಪಕ್ಕೆ ತರುವ ಪ್ರಯತ್ನವಾಗಿದ್ದಿತು. ಎಲ್ಲರೂ ಸಮಾನರು ಎಂಬ ತತ್ವವನ್ನು ಅನುಸರಿಸುವುದು ಶಿವಶರಣರ ಮೂಲಭೂತವಾದ ಉದ್ದೇಶವಾಗಿದ್ದಿತು.

**ಪರಾಮರ್ಶನ ಗ್ರಂಥಗಳು:**


1. ಗದ್ದಗಿಮಠ ಬಿ. ಎಸ್., (1963), ಕನ್ನಡ ಜನಪದ ಗೀತೆಗಳು, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
2. ಮಧುರಚನ್ನ, (1931), ಗರತಿಯ ಹಾಡು, ಧಾರವಾಡ: ಗೆಳೆಯರ ಗುಂಪು.
3. ಸುಂಕಾಪುರ ಎಂ. ಎಸ್. (ಸಂ.), ಜೀವನಜೋಕಾಲಿ (ಹೋಳಿ ಹಾಡು), ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
4. ಸುಂಕಾಪುರ ಎಂ. ಎಸ್. (ಸಂ.), ಜೀವನಜೋಕಾಲಿ (ದುಂದುಮೆ ಪದ), ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
5. ಶಾಂತದೇವಿ ಮಾಳವಾಡ, ಜನಪದ ಸಾಹಿತ್ಯದಲ್ಲಿ ಶರಣರು.
6. ಕಾಳೇಗೌಡ ನಾಗವಾರ, ತ್ರಿಪದಿ, ರಗಳೆ ಜನಪದ ಸಾಹಿತ್ಯ.
7. ತಿಪ್ಪೇಸ್ವಾಮಿ ಡಿ. ಎಸ್., ಬಳ್ಳಾರಿ ಜಿಲ್ಲೆಯ ಜನಪದ ಗೀತೆ ಸಂಪ್ರದಾಯಗಳು.
8. ಬಸವಪಥ (ಸಂಪುಟ: 24, ಸಂಚಿಕೆ: 2), ಬೆಂಗಳೂರು: ಬಸವ ಸಮಿತಿ.
9. ನಿಜಲಿಂಗಪ್ಪ ಮಟ್ಟಿಹಾಳ, ವಿಜಾಪುರ ಜಿಲ್ಲೆಯ ಲಾವಣಿ ಮೇಳಗಳು.
10. ಸುಂಕಾಪುರ ಎಂ. ಎಸ್. (ಸಂ.), ಜೀವನಜೋಕಾಲಿ (ಡೊಳ್ಳಿನ ಹಾಡು), ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
11. ಶಿವಾನಂದ ಸುಬ್ಬಣ್ಣವರ (ಸಂ.), ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ.
12. ಜವರೇಗೌಡ ದೇ., ಜನಪದ ಅಧ್ಯಯನ.
13. ವೀರಣ್ಣ ದಂಡೆ, ಜನಪದ ಸಾಹಿತ್ಯ ಸಿದ್ಧಾಂತಗಳು.
14. ಪರಮಶಿವಯ್ಯ ಜಿ. ಶಂ., (1979), ಕರ್ನಾಟಕದ ಜನಪದ ಸಮೀಕ್ಷೆ.